**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 476/2020**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ಸುವರ್ಣಾ ಶಿಂಧೆ** | **ಪಿ.ಡಬ್ಲ್ಯೂ-01** |
| **ಗಂಡನ ಹೆಸರು** | **:** | **ಆಧಿತ್ಯ ಶಿಂಧೆ** | **ಸಿ.ಡಬ್ಲ್ಯೂ-01** |
| **ವಯಸ್ಸು** | **:** | **50 ವರ್ಷ** | |
| **ಉದ್ಯೋಗ** | **:** | **ಗೃಹಿಣಿ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 02.07.2026.** |
| **ವಾಸಸ್ಥಳ** | **:** | **ಸಂಡೂರು** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1 ರಿಂದ 3 ನೇ ಆರೋಪಿತರು ನನಗೆ ಗೊತ್ತು. ಚಾಸಾ 2 ಮತ್ತು 3 ರವರು ಗೊತ್ತು. ಚಾಸಾ 4 ನನ್ನ ಗಂಡ. ಚಾಸಾ 5 ನನ್ನ ಮಗ, ಅವರು ದಿಃ13.01.2026 ರಂದು ಮರಣ ಹೊಂದಿರುತ್ತಾರೆ. ಚಾಸಾ 6 ರಿಂದ 9 ರವರು ನನಗೆ ಗೊತ್ತು.

ದಿಃ12.07.2020 ರಂದು ಸಂಜೆ 6.00 ಗಂಟೆಯ ಸಮಯದಲ್ಲಿ 1 ರಿಂದ 3 ನೇ ಆರೋಪಿತರು ಕೂಡಿಕೊಂಡು ನಮ್ಮ ಮನೆಯ ಹತ್ತಿರ ಬಂದು ಕೆಟ್ಟ ಕೆಟ್ಟ ಪಧಗಳಿಂದ ಚಾಸಾ 4 ರವರಿಗೆ ಬೈದು, ಕಲ್ಲಿನಿಂದ ಅವರ ಮೇಲೆ ಹಲ್ಲೆ ಮಾಡಿರುತ್ತಾರೆ. ಅದೇ ರೀತಿಯಾಗಿ 1 ನೇ ಆರೋಪಿಯು ಒಂದು ದೊಣ್ಣೆಯಿಂದ ನನ್ನ ಬಲ ಕೈಗೆ ಹೊಡೆದಿರುತ್ತಾರೆ. 1 ನೇ ಆರೋಪಿ ದೊಣ್ಣೆಯಿಂದ ಚಾಸಾ 4 ರವರಿಗೆ ಹಲ್ಲೆ ಮಾಡಿರುತ್ತಾರೆ. ನಾನು ಬಿಡಿಸಲು ಹೋದಾಗ 1 ನೇ ಆರೋಪಿಯು ನನ್ನ ಸೀರೆ ಹಿಡಿದು ಎಳೆದಾಡಿ ನನ್ನ ಕಪಾಳಕ್ಕೆ ಹೋಡೆದಿರುತ್ತಾರೆ. ಇದರ ಪರಿಣಾಮ ನಾನು ಕೆಳಗೆ ಬಿದ್ದಿರುತ್ತೇನೆ. ಅದೇ ಸಮಯದಲ್ಲಿ ಚಾಸಾ 5 ರಿಂದ 9 ರವರು ಬಂದು ಜಗಳ ಬಿಡಿಸಿರುತ್ತಾರೆ. ಆರೋಪಿತರು ಹೊಲದಲ್ಲಿ ಕಾಲು ಇಟ್ಟರೆ ನಿಮಗೆ ಜೀವಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ.

ನಂತರ ನಾನು ಮತ್ತು ಚಾಸಾ 4 ರವರು ಸಂಡೂರು ಸರ್ಕಾರಿ ಆಸ್ಪತ್ರೆ ಹೋಗಿ ದಾಖಲಾಗಿರುತ್ತೇವೆ. ಮರುದಿನ ಬೆಃ8.00 ಗಂಟೆಗೆ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ. ಸಾಕ್ಷಿ ದೂರಿನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ14.07.2020 ರಂದು ಚಾಸಾ 12 ರವರು ಘಟನಾ ಸ್ಥಳಕ್ಕೆ ಬಂದು ನನ್ನನ್ನು ವಿಚಾರಿಸಿ, ಫೋಟೊ ತೆಗೆದು ಪಂಚನಾಮೆಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ 2 ಮತ್ತು 3 ರವರು ಇದ್ದರು. ಸದರಿ ಪಂಚನಾಮೆಯನ್ನು ಬೆಃ8.00 ರಿಂದ 10.00 ರವರೆಗೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಮೇಲೆ ಹೇಳಿರುವ ಗಲಾಟೆಯ ವಿಚಾರದಲ್ಲಿ ಮಾಡಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಒಂದು ಕಲ್ಲು ಮತ್ತು ದೊಣ್ಣೆಯನ್ನು ಜಪ್ತು ಪಡೆಸಿಕೊಂಡಿರುತ್ತಾರೆ. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಭಾವಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ3 ಮತ್ತು ನಿಪಿ4 ಎಂದು ಗುರುತಿಸಲಾಯಿತು.

**(ಎಪಿಪಿಯವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃ ಎ.ಪಿ.ಪಿ. ರವರಿಂದಃ</u>**

ನನಗೆ ಮತ್ತು 1ನೇ ಆರೋಪಿಯ ನಡುವೆ ಲಕ್ಷ್ಮಿಪುರ ಗ್ರಾಮದ ಸರ್ವೆ ನಂಃ6/4 ವಿಸ್ತೀರ್ಣ 1 ಎಕರೆ 17 ಸೆಂಟ್ಸ್ ಭೂಮಿಗೆ ಸಂಬಂಧಿಸಿದಂತೆ ಒಂದು

ಅಗ್ರಿಮೆಂಟ್ ಆಗಿತ್ತು ಎಂದರೆ ಸರಿ. ಸದರಿ ಜಮೀನು 1 ನೇ ಆರೋಪಿಯ ತಂದೆಯ ಹೆಸರಿನಲ್ಲಿ ಇರುವುದರಿಂದ ಅವರು ಸದರಿ ಜಮೀನು ಬಿಟ್ಟು ಕೊಡುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿ. ದಿಃ13.07.2020 ರಂದು ರಾತ್ರಿ 8.00 ಗಂಟೆಗೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ.

**(ಸಹಾಯಕ ಸರ್ಕಾರಿ ಅಭಿಯೋಜಕರವರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಅನುಮತಿಸಲಾಯಿತು. )**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**